**OS: 88/2019**
**D.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 06.03.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ದಿನಾಂಕ 06.03.2026 ರಂದು ನಮ್ಮ ವಕೀಲರ ಮೂಲಕ, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಮಾಡಿರುತ್ತೇನೆ.

**<u>ಪಾಟೀ ಸವಾಲು ವಾದಿ ಪರ ವಕೀಲರಿಂದ</u>**

ವಾದಿಯು ಈ ದಾವೆಯನ್ನು ನನ್ನ ಮತ್ತು ಉಳಿದ ಪ್ರತಿವಾದಿಗಳ ವಿರುದ್ಧ ಭಾಗಾಂಶ ಕೋರಿ ಸಲ್ಲಿಸಿರುತ್ತಾರೆ. ದಾವಾ ಆಸ್ತಿಗಳು ಮೂಲತಃ ನನ್ನ ತಾಯಿಯ ತಂದೆಯ ಆಸ್ತಿಗಳು ಇರುತ್ತವೆ. ನನ್ನ ಅಜ್ಜ ನರಸಿಂಹಪ್ಪನವರಿಗೆ 5 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ನರಸಿಂಹಪ್ಪನವರು ಜೀವಂತವಿದ್ದ ಕಾಲಕ್ಕೆ ಅವರ ಮತ್ತು ಅವರ ಮಕ್ಕಳ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿ. ನರಸಿಂಹಪ್ಪ ಮತ್ತು ಅವರ ಹೆಂಡತಿ ಮೃತಪಟ್ಟ ನಂತರ ಅವರ 5 ಜನ ಮಕ್ಕಳ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. 1995-96 ನೇ ಇಸವಿಯಲ್ಲಿ ಪಾಲುವಿಭಾಗ ಆಗಿರುತ್ತದೆ. 5 ಜನ ಅಕ್ಕ-ತಂಗಿಯರ ನಡುವೆ ಪಾಲುವಿಭಾಗ ಆಗಿದೆ. ನಾಗಮ್ಮನವರ ಹೆಸರಿಗೆ ಸರ್ವೆ ನಂಃ 252 ರಲ್ಲಿ ವಿಸ್ತೀರ್ಣ 1 ಎಕರೆ 90 ಸೆಂಟ್ಸ್ ಮತ್ತು ಸರ್ವೆ ನಂಃ 270 ರಲ್ಲಿ ವಿಸ್ತೀರ್ಣ 1 ಎಕರೆ 10 ಸೆಂಟ್ಸ್ ಆಸ್ತಿ ಅವರ ಭಾಗಕ್ಕೆ ಬಂದಿರುತ್ತದೆ. ಸಂಜೀವಮ್ಮನವರಿಗೆ 7 ಎಕರೆಗಿಂತ ಹೆಚ್ಚು ಆಸ್ತಿ ಅವರ ಭಾಗಕ್ಕೆ ಬಂದಿರುತ್ತದೆ, ಸರ್ವೆ ನಂಬರ್ ಮತ್ತು ಚೆಕ್ಕುಬಂದಿ ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಶಾಂತಮ್ಮನವರಿಗೆ 4 ಎಕರೆ 32 ಸೆಂಟ್ಸ್ ಆಸ್ತಿ ಅವರ ಭಾಗಕ್ಕೆ ಬಂದಿರುತ್ತದೆ, ಸರ್ವೆ ನಂಬರ್ ಮತ್ತು ಚೆಕ್ಕುಬಂದಿ ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಹನುಮಕ್ಕನವರಿಗೆ 4 ಎಕರೆ ಜಮೀನು ಅವರ ಭಾಗಕ್ಕೆ ಬಂದಿರುತ್ತದೆ, ಸರ್ವೆ ನಂಬರ್ ಮತ್ತು ಚೆಕ್ಕುಬಂದಿ ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಪಾಲುವಿಭಾಗ ಆಗುವ ಕಾಲಕ್ಕೆ ನಾನು ಇರಲಿಲ್ಲ ನನ್ನ ತಾಯಿ ಇದ್ದರು. ನನ್ನ ತಾಯಿಯ ಹೇಳಿಕೆ ಮೇರೆಗೆ ಪಾಲುವಿಭಾಗ ಆಗಿದೆ ಎಂದು ಹೇಳುತ್ತಿದ್ದೇನೆ. ಪಾಲುವಿಭಾಗ ಪತ್ರವು ಬರವಣಿಗೆ ಮೂಲಕ ಆಗಿದೆ. ಸದರಿ ಪಾಲುವಿಭಾಗ ಪತ್ರದ ಪ್ರಕಾರ

ಅವರವರ ಭಾಗಕ್ಕೆ ಬಂದಂತಹ ಆಸ್ತಿಗಳು ಅವರವರ ಹೆಸರಿಗೆ ಹಕ್ಕು ಬದಲಾವಣೆ ಆಗಿರುತ್ತದೆ. ನನ್ನ ತಾಯಿ ಜೀವಂತ ಇದ್ದಾಗಲೆ 1995-96 ರಲ್ಲಿ ಅವರ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಮತ್ತು ಕಂದಾಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸದೆ ಇದ್ದರು ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಹೇಳಿ ಬರೆಸಿರುತ್ತೇನೆ. ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ವಿಭಾಗ ಆದ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನರಸಿಂಹಪ್ಪನ 5 ಜನ ಮಕ್ಕಳ ನಡುವೆ ಯಾವುದೇ ವಿಭಾಗ ಆಗಿಲ್ಲ ಆದರೂ ವಿಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನರಸಿಂಹಪ್ಪ ಮೃತಪಟ್ಟ ನಂತರ 5 ಜನ ಮಕ್ಕಳು ಒಟ್ಟಿಗೆ ಒಂದೇ ಕುಟುಂಬದಲ್ಲಿ ಇದ್ದರು ಎಂದರೆ ಸರಿ. ಅವರು ಮೃತಪಟ್ಟ ನಂತರ ಅವರ ಮಕ್ಕಳು ಒಂದೇ ಕುಟುಂಬದಲ್ಲಿ ಇದ್ದರು ಎಂದರೆ ಸರಿ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳಿಗೂ ಹಕ್ಕು ಇದೆ ಎಂದರೆ ಸರಿ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**